KARN020000622020

LOKESHA Digitally signed by LOKESHA Date: 2026.07.25 11:36:58 +0530



Presented on : 16-01-2020
Registered on : 18-01-2020
Decided on : 24-07-2026
Duration :06 years, 06 month, 08 days

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ, ರಾಮನಗರ.**

ಃಉಪಸ್ಥಿತರುಃ- ಶ್ರೀ.ಲೋಕೇಶ, ಬಿ.ಎ., ಎಲ್.ಎಲ್.ಬಿ.,
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ, ರಾಮನಗರ.

**ಸಿ.ಸಿ. ನಂ.4/2020**

**ದಿನಾಂಕ:- 24 ನೇ ಜುಲೈ , 2026**

| | | |
|---|---|---|
| **ಪಿರ್ಯಾದುದಾರರು** | : | ಬೆಂಗಳೂರು ಸಿಟಿ ರೈಲ್ವೆ ಪೊಲೀಸ್ ಠಾಣೆ,<br>ಬೆಂಗಳೂರು |
| | | ವಿರುದ್ಧ |
| **ಆರೋಪಿ** | : | ರವಿ ಬಿನ್ ಲೇಟ್ ಅಪ್ಪಣ್ಣ,<br>ವಯಸ್ಸು ಸುಮಾರು 29 ವರ್ಷ,<br>ವಾಸಃ 2 ನೇ ಅಡ್ಡರಸ್ತೆ,<br>ಇಂದಿರಾನಗರ,<br>ಸೇಲಂ ಜಿಲ್ಲೆ,<br>ತಮಿಳುನಾಡು. |

## ತೀರ್ಪು

ಚಾಸಾ-1 ಕುಮಾರಿ ಕೆ. ಸುಷ್ಮಿತ ರವರು ನೀಡಿದ ಪ್ರಥಮ ವರ್ತಮಾನ ಹೇಳಿಕೆಯನ್ನು, ಚಾಸಾ-13 ದಿಲೀಪ್ ಜಿ.ಆರ್. ಪೊಲೀಸ್ ಉಪ ನೀರಿಕ್ಷಕರು ಸ್ವೀಕರಿಸಿ ಮೊಕದ್ದಮೆ ಸಂಖ್ಯೆ 43/2019 ರಂತೆ ಭಾರತೀಯ ದಂಡ ಸಂಹಿತೆ ಕಲಂ 392ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ನಂತರದಲ್ಲಿ ಚಾಸಾ-14 ಶ್ರೀ ನಾಗರಾಜು

ಎಂ.ಎನ್. ರವರು ಅಂದಿನ ವೃತ್ತ ನಿರೀಕ್ಷಕರು, ಎಸ್.ಬಿ.ಸಿ. ರೈಲ್ವೆ ವೃತ್ತ, ಬೆಂಗಳೂರು ಇವರು ತನಿಖೆಯನ್ನು ಕೈಗೊಂಡು, ತನಿಖೆ ಪೂರೈಸಿ ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 392 ರ ಅಡಿಯಲ್ಲಿ ದೋಷಾರೋಪಣಾ ಪತ್ರ ಸಲ್ಲಿಸಿರುತ್ತಾರೆ.

2. ಅಭಿಯೋಜನೆ ಕೇಸಿನ ಸಾರಾಂಶ ಎಂದರೆ, ದಿನಾಂಕಃ25.02.2019 ರಂದು ಚಾಸಾ-1 ಕುಮಾರಿ ಸುಪ್ರಿತರವರು ಚನ್ನಪಟ್ಟಣಕ್ಕೆ ಹೋಗುವ ಸಲುವಾಗಿ ಬೆಂಗಳೂರು ನಗರ ರೈಲ್ವೆ ನಿಲ್ದಾಣಕ್ಕೆ ಬಂದು ನಂ.56262 ಚಾಮರಾಜನಗರ ಪ್ಯಾಸೆಂಜರ್ ರೈಲುಗಾಡಿಯ ಜನರಲ್ ಬೋಗಿಯಲ್ಲಿ ಪ್ರಯಾಣ ಮಾಡಿಕೊಂಡು ಹೋಗುವಾಗ ಸಂಜೆ ಸುಮಾರು 4.50 ಗಂಟೆ ಸಮಯದಲ್ಲಿ ರಾಮನಗರ ರೈಲ್ವೆ ನಿಲ್ದಾಣ ಬಿಟ್ಟ ಸ್ವಲ್ಪ ಹೊತ್ತಿನ ನಂತರ ಆರೋಪಿ ರವಿ ಕತ್ತಿನಲ್ಲಿದ್ದ 28 ಗ್ರಾಂ ತೂಕದ ಬಂಗಾರದ ಚೈನ್ ಒಟ್ಟು ರೂ.75,000/- ಗಳು ಬೆಲೆ ಬಾಳುವುದನ್ನು ಹಿಂದಿನಿಂದ ಕಿತ್ತುಕೊಂಡು ನಿಧಾನವಾಗಿ ಚಲಿಸುತ್ತಿದ್ದ ರೈಲಿನಿಂದ ಜಿಗಿದು ಓಡಿ ಹೋಗಿದ್ದು, ಆ ನಂತರ ಸದರಿ ಬಂಗಾರದ ಚೈನನ್ನು ಚಾಸಾ-4 ರವರಿಗೆ ಮಾರಾಟ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 392 ರ ಅಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂಬುದಾಗಿರುತ್ತದೆ.

3. ಕೇಸಿನ ತನಿಖಾ ಹಂತದಲ್ಲೇ ಆರೋಪಿತನನ್ನು ಬಾಡಿ ವಾರೆಂಟ್ ಮುಖಾಂತರ ಹಾಜರುಪಡಿಸಿದ್ದು, ನಂತರದಲ್ಲಿ ಆರೋಪಿಯು ಜಾಮೀನಿನ ಮೇಲೆ

ಬಿಡುಗಡೆಗೊಂಡಿರುತ್ತಾರೆ. ಚಾಸಾ-14 ಶ್ರೀ ನಾಗರಾಜು ಎಂ.ಎನ್., ಅಂದಿನ ಪೊಲೀಸ್ ವೃತ್ತ ನಿರೀಕ್ಷಕರು, ಎಸ್.ಬಿ.ಸಿ. ವೃತ್ತ, ಬೆಂಗಳೂರು ಇವರು ತನಿಖೆಯನ್ನು ಕೈಗೊಂಡು, ತನಿಖೆ ಪೂರೈಸಿ ದೋಷಾರೋಪಣಾ ಪತ್ರ ಸಲ್ಲಿಸಿದ್ದು, ನಂತರದಲ್ಲಿ ಭಾರತೀಯ ದಂಡ ಸಂಹಿತೆ ಕಲಂ 392ರ ಅಡಿಯಲ್ಲಿನ ಅಪರಾಧಕ್ಕಾಗಿ ಸಂಜ್ಞಾತೆಯನ್ನು ತೆಗೆದುಕೊಂಡು ಪ್ರಕರಣ ದಾಖಲಿಸಿ, ಆರೋಪಿತನ ವಿರುದ್ದ ಸಮನ್ಸ್ ಹೊರಡಿಸಲಾಯಿತು. ನಂತರ ಆರೋಪಿಯು ತಲೆ ಮರೆಸಿಕೊಂಡಿದ್ದು, ನಂತರ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ಜಾಮೀನಿನ ಮೇಲೆ ಬಿಡುಗಡೆ ಆಗಿದ್ದು, ಆ ನಂತರದಲ್ಲಿ ಆರೋಪಿಯು ತಲೆವರೆಸಿಕೊಂಡಿದ್ದು, ಆರೋಪಿಯ ವಿರುದ್ದ ಉದ್ಘೋಷಣಾ ವಾರೆಂಟನ್ನು ಹೊರಡಿಸಲಾಗಿದ್ದು, ಅದು ಜಾರಿ ಆಗಿದ್ದರೂ ಸಹಾ ಆರೋಪಿಯು ನ್ಯಾಯಾಲಯದ ಮುಂದೆ ಹಾಜರಾಗಿರಲಿಲ್ಲ. ನಂತರದಲ್ಲಿ ತಮಿಳುನಾಡು, ಸೇಲಂ ಜಿಲ್ಲೆ, ತಹಶೀಲ್ದಾರ್ ರವರಿಂದ ಆರೋಪಿಯ ಹೆಸರಿನಲ್ಲಿ ಯಾವುದೇ ಸ್ಥಿರ ಚರ ಆಸ್ತಿಗಳು ಇರುವುದಿಲ್ಲ ಎಂದು ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಸದರಿ ವರದಿಯನ್ನು ಸ್ವೀಕರಿಸಿ, ಆರೋಪಿಯನ್ನು ಉದ್ಘೋಷಿತ ಆರೋಪಿ ಎಂದು ಘೋಷಿಸಲಾಗಿತ್ತು. ನಂತರದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ.299 ರಡಿ ಸಾಕ್ಷಿದಾರರ ವಿಚಾರಣೆಗೆ ಹಾಕಿಕೊಳ್ಳಲಾಗಿತ್ತು. ನಂತರದಲ್ಲಿ ಆರೋಪಿಯು ಬೇರೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿ ಇದ್ದು, ಆತನ ಹಾಜರಾತಿಯನ್ನು ಬಾಡಿ ವಾರೆಂಟ್ ಮೂಲಕ ಪಡೆಯಲಾಯಿತು. ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು. ಆ ನಂತರದಲ್ಲಿ ಆರೋಪಿಯು ತಲೆಮರೆಸಿಕೊಂಡಿದ್ದು,

ಆತನನ್ನು ದಿನಾಂಕಃ24.11.2025 ರಂದು ನ್ಯಾಯಾಲಯದ ಮುಂದೆ ವಾರೆಂಟ್ ನಲ್ಲಿ ಹಾಜರುಪಡಿಸಿದ್ದು, ಆತನನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿತ್ತು. ನಂತರ ಆರೋಪಿಗೆ ಭಾರತೀಯ ದಂಡ ಸಂಹಿತೆ ಕಲಂ 392ರ ಅಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ ಓದಿ ಹೇಳಲಾಗಿದ್ದು, ಆರೋಪಿ ಆರೋಪವನ್ನು ಅಲ್ಲಗಳೆದಿದ್ದು, ವಿಚಾರಣೆ ಆಗಬೇಕೆಂದು ಕೋರಿಕೊಂಡ ಮೇರೆಗೆ ಪ್ರಕರಣವನ್ನು ಅಧಿವಿಚಾರಣೆಗೆ ಹಾಕಿಕೊಳ್ಳಲಾಯಿತು.

4. ಅಭಿಯೋಜನೆಯವರು ಆರೋಪಿತನ ವಿರುದ್ಧ ಹೊರಿಸಲಾದ ಆರೋಪವನ್ನು ರುಜುವಾತು ಪಡೆಸುವ ಸಲುವಾಗಿ ಒಟ್ಟು14 ಜನ ಸಾಕ್ಷಿದಾರರನ್ನು ದೋಷಾರೋಪಣಾ ಪತ್ರದಲ್ಲಿ ನಮೂದಿಸಿ, ಆ ಪೈಕಿ ಪ್ರಾಸಾ-1 ರಿಂದ ಪ್ರಾಸಾ-7 ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿ ನಿಪಿ-1 ರಿಂದ ನಿಪಿ-11 ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಿಕೊಂಡಿರುತ್ತಾರೆ. ನಂತರದಲ್ಲಿ ಆರೋಪಿ ವಿರುದ್ಧ ಅಭಿಯೋಜನೆ ಸಾಕ್ಷಿದಾರರ ಸಾಕ್ಷ್ಯದಲ್ಲಿ ಕಂಡುಬಂದಿರುವ ಸಾಕ್ಷ್ಯ ಹೇಳಿಕೆಯನ್ನು ಅವರಿಗೆ ಓದಿ ವಿವರಿಸಿ ಹೇಳಲಾಗಿ ಅವರು ಅಪರಾಧಿಕ ಕೃತ್ಯದಲ್ಲಿ ತಮ್ಮ ಭಾಗವಹಿಸುವಿಕೆಯನ್ನು ಪಾತ್ರವನ್ನು ಅಲ್ಲಗಳೆದಿರುತ್ತಾರೆ ಹಾಗು ತಮ್ಮ ಪರ ಪ್ರತಿರಕ್ಷಣ ಸಾಕ್ಷ್ಯ ಇಲ್ಲವೆಂದು ತಿಳಿಸಿದ ಮೇರೆಗೆ ಪ್ರಕರಣವನ್ನು ವಾದ ವಿವಾದ ಆಲಿಸಲು ಮುಂದೂಡಲಾಯಿತು. ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆರೋಪಿಯ

ಪರವಾಗಿ ಕಾನೂನು ಸೇವಾ ಪ್ರಾಧಿಕಾರದಿಂದ ಶ್ರೀಯುತ ಮುರುಳಿ ವಕೀಲರನ್ನು ನೇಮಿಸಲಾಗಿರುತ್ತದೆ..

5. ನನ್ನ ನಿಣರ್ಯಕ್ಕೆ ಬಂದ ಅಂಶಗಳು ಈ ಕೆಳಕಂಡಿರುತ್ತವೆ.

1. ದಿನಾಂಕಃ25.02.2019 ರಂದು ಚಾಸಾ-1 ಕುಮಾರಿ ಸುಷ್ಮಿತರವರು ಚನ್ನಪಟ್ಟಣಕ್ಕೆ ಹೋಗುವ ಸಲುವಾಗಿ ಬೆಂಗಳೂರು ನಗರ ರೈಲ್ವೆ ನಿಲ್ದಾಣಕ್ಕೆ ಬಂದು ನಂ.56262 ಚಾಮರಾಜನಗರ ಪ್ಯಾಸೆಂಜರ್ ರೈಲುಗಾಡಿಯ ಜನರಲ್ ಬೋಗಿಯಲ್ಲಿ ಪ್ರಯಾಣ ಮಾಡಿಕೊಂಡು ಹೋಗುವಾಗ ಸಂಜೆ ಸುಮಾರು 4.50 ಗಂಟೆ ಸಮಯದಲ್ಲಿ ರಾಮನಗರ ರೈಲ್ವೆ ನಿಲ್ದಾಣ ಬಿಟ್ಟ ಸ್ವಲ್ಪ ಹೊತ್ತಿನ ನಂತರ ಆರೋಪಿ ರವಿ ಕತ್ತಿನಲ್ಲಿದ್ದ 28 ಗ್ರಾಂ ತೂಕದ ಬಂಗಾರದ ಚೈನ್ ಒಟ್ಟು ರೂ.75,000/- ಗಳು ಬೆಲೆ ಬಾಳುವುದನ್ನು ಹಿಂದಿನಿಂದ ಕಿತ್ತುಕೊಂಡು ನಿಧಾನವಾಗಿ ಚಲಿಸುತ್ತಿದ್ದ ರೈಲಿನಿಂದ ಜಿಗಿದು ಓಡಿ ಹೋಗಿದ್ದು, ಆ ನಂತರ ಸದರಿ ಬಂಗಾರದ ಚೈನನ್ನು ಚಾಸಾ-4 ರವರಿಗೆ ಮಾರಾಟ ಮಾಡಿದ್ದು, ಆ ಮೂಲಕ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 392 ರ ಅಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂದೇಹವಾಗಿ ಸಾಬೀತುಪಡಿಸಿದ್ದಾರೆ?

2. ಯಾವ ಆದೇಶ?

6. ಮೇಲ್ಕಂಡ ಅಂಶಗಳಿಗೆ ಉತ್ತರ ಈ ಕೆಳಕಂಡಿರುತ್ತವೆ.

ಅಂಶ 1. ನಕರಾತ್ಮಕ.

ಅಂಶ 2. ಅಂತಿಮ ಆದೇಶದಂತೆ.

**<u>ಕಾರಣಗಳು</u>**

**7. <u>ಅಂಶ 1ಃ</u>** ಅಭಿಯೋಜನೆಯವರ ಪ್ರಕಾರ ದಿನಾಂಕ ದಿನಾಂಕಃ25.02.2019 ರಂದು ಚಾಸಾ-1 ಕುಮಾರಿ ಸುಷ್ಮಿತರವರು ಚನ್ನಪಟ್ಟಣಕ್ಕೆ ಹೋಗುವ ಸಲುವಾಗಿ ಬೆಂಗಳೂರು ನಗರ ರೈಲ್ವೆ ನಿಲ್ದಾಣಕ್ಕೆ ಬಂದು ನಂ.56262 ಚಾಮರಾಜನಗರ ಪ್ಯಾಸೆಂಜರ್ ರೈಲುಗಾಡಿಯ ಜನರಲ್ ಬೋಗಿಯಲ್ಲಿ ಪ್ರಯಾಣ ಮಾಡಿಕೊಂಡು ಹೋಗುವಾಗ ಸಂಜೆ ಸುಮಾರು 4.50 ಗಂಟೆ ಸಮಯದಲ್ಲಿ ರಾಮನಗರ ರೈಲ್ವೆ ನಿಲ್ದಾಣ ಬಿಟ್ಟ ಸ್ವಲ್ಪ ಹೊತ್ತಿನ ನಂತರ ಆರೋಪಿ ರವಿ ಕತ್ತಿನಲ್ಲಿದ್ದ 28 ಗ್ರಾಂ ತೂಕದ ಬಂಗಾರದ ಚೈನ್ ಒಟ್ಟು ರೂ.75,000/- ಗಳು ಬೆಲೆ ಬಾಳುವುದನ್ನು ಹಿಂದಿನಿಂದ ಕಿತ್ತುಕೊಂಡು ನಿಧಾನವಾಗಿ ಚಲಿಸುತ್ತಿದ್ದ ರೈಲಿನಿಂದ ಜಿಗಿದು ಓಡಿ ಹೋಗಿದ್ದು, ಆ ನಂತರ ಸದರಿ ಬಂಗಾರದ ಚೈನನ್ನು ಚಾಸಾ-4 ರವರಿಗೆ ಮಾರಾಟ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 392ರ ಅಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂದು ಅಭಿಯೋಜನೆಯವರು ಆರೋಪಿಯ ವಿರುದ್ಧ ಆರೋಪಿಸಿರುತ್ತಾರೆ. ಈ ಆರೋಪವನ್ನು ಸಾಭೀತುಪಡಿಸಲು ಅಭಿಯೋಜನೆಯವರು ಒಟ್ಟು 6 ಜನ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ. ನಿಪಿ-1 ದೂರು,  ನಿಪಿ-2 ರಿಂದ 5 ಭಾವಚಿತ್ರಗಳು,  ನಿಪಿ-6 ಪಂಚನಾಮೆ,  ನಿಪಿ-7 ಮಹಜರ್ ಭಾವಚಿತ್ರ, ನಿಪಿ-8 ಪ್ರಾಸಾ-2 ರವರ ಹೇಳಿಕೆ ಭಾಗ, ನಿಪಿ-9 ಪ್ರಾಸಾ-3 ರವರ ಹೇಳಿಕೆ ಭಾಗ,  ನಿಪಿ-10 ಪ್ರಥಮ

ವರ್ತಮಾನ ವರದಿ, ನಿಪಿ-11 ಸಿಬ್ಬಂದಿಗಳು ನೀಡಿದ ನಿವೇದನೆಯನ್ನು ಅಭಿಯೋಜನೆಯ ಪರವಾಗಿ ಗುರುತಿಸಲಾಯಿತು.

8. ಚಾಸಾ-1/ಪ್ರಾಸಾ-1 ಸುಷ್ಮಿತ ಪಿರ್ಯಾದುದಾರರು ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 25.02.2019ರಂದು ನಾನು ಚನ್ನಪಟ್ಟಣದಿಂದ ಬೆಂಗಳೂರಿಗೆ ಅಂತಿಮ ಸೆಮಿಸ್ಟರ್ ನಲ್ಲಿ ವಿದ್ಯಾಭ್ಯಾಸ ಮಾಡಲು ಹೋಗುತ್ತಿದ್ದಾಗ ಸಂಜೆ 4.45-5.00 ಗಂಟೆಗೆ ರೈಲಿನಲ್ಲಿ ಚನ್ನಪಟ್ಟಣಕ್ಕೆ ಹೋಗುತ್ತಿದ್ದಾಗ ರಾಮನಗರ ರೈಲ್ವೆ ನಿಲ್ದಾಣದಲ್ಲಿ ನಿಲುಗಡೆ ಕೊಟ್ಟು ನಂತರದಲ್ಲಿ ರೈಲು ಚಲಿಸಲು ಪ್ರಾರಂಭವಾಗುತ್ತಿದ್ದಾಗ ನನ್ನ ಹಿಂಬದಿಯಿಂದ ಒಬ್ಬ ಆಸಾಮಿ ಬಂದು ನನ್ನ ಕತ್ತಿನಲ್ಲಿದ್ದ ಚಿನ್ನದ ಸರವನ್ನು ಕಿತ್ತುಕೊಂಡು ಹೊರಟುಹೋದನು. ಅದು 28 ಗ್ರಾಂ ತೂಕವಿತ್ತು. ನಂತರ ರಾಮನಗರದ ಪೊಲೀಸರು ಬಂದು ಹುಡುಕಾಡಿದರು, ಆತ ಸಿಗಲಿಲ್ಲ. ನಂತರ ಮಾರನೇ ದಿನ ಮನೆಯಲ್ಲಿ ಮಾತನಾಡಿ ದಿನಾಂಕ 27.02.2019ರಂದು ಬೆಂಗಳೂರಿನ ರೈಲ್ವೆ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟೆ ಎಂಬುದಾಗಿ ನುಡಿದಿರುತ್ತಾರೆ. ಮುಂದುವರೆದು ಮೇ ತಿಂಗಳಲ್ಲಿ ಪೊಲೀಸರು ನನಗೆ ದೂರವಾಣಿ ಕರೆ ಮಾಡಿ ನಿಮ್ಮ ಚಿನ್ನದ ಸರವನ್ನು ಬಂದು ಗುರುತಿಸಿ ಎಂದು ಹೇಳಿದರು. ನಾನು ಬೆಂಗಳೂರಿನ ರೈಲ್ವೆ ಪೊಲೀಸ್ ಠಾಣೆಗೆ ಹೋದೆ. ಅಲ್ಲಿ ನನ್ನ ಚಿನ್ನದ ಸರ ಠಾಣೆಯಲ್ಲಿತ್ತು, ಅದನ್ನು ಗುರುತಿಸಿದೆ. ನನ್ನ ಚಿನ್ನದ ಸರವನ್ನು ಕಿತ್ತುಕೊಂಡು ಹೋಗಿದ್ದ ವ್ಯಕ್ತಿಯನ್ನು ಪೊಲೀಸ್ ಠಾಣೆಯಲ್ಲಿ ತೋರಿಸಿದರು, ನಾನು ಆತನನ್ನು ನೋಡಿ ಗುರುತಿಸಿದೆ ಎಂಬುದಾಗಿ ನ್ಯಾಯಾಲಯದ

ಮುಂದೆಯು ಸಹಾ ಆರೋಪಿಯನ್ನು ಗುರುತಿಸಿರುತ್ತಾರೆ. ಮುಂದುವರೆದು ನನ್ನ ಚಿನ್ನದ ಸರವನ್ನು ನಾನು ಪೊಲೀಸ್ ಠಾಣೆಯಿಂದ ಬಿಡಿಸಿಕೊಂಡೆ, ಅದು ನನ್ನ ಬಳಿಯೇ ಇದೆ. ನನಗೆ ಚಿನ್ನದ ಸರ ಬಿಡುವಾಗ ಪೊಲೀಸರು ಮಹಜರ್ ಮಾಡಿರುತ್ತಾರೆ. ಮುಚ್ಚಳಿಕೆ ಬರೆದುಕೊಟ್ಟು, ಚಿನ್ನದ ಸರ ಬಿಡಿಸಿಕೊಂಡಿರುತ್ತೇನೆ ನಾನು ಚಿನ್ನದ ಸರವನ್ನು ಬಿಡಿಸಿಕೊಳ್ಳುವಾಗ ಪೊಲೀಸರು ಫೋಟೋ ತೆಗೆದಿರುತ್ತಾರೆ ಎಂಬುದಾಗಿ ನುಡಿದಿರುತ್ತಾರೆ.

9. ಪ್ರಾಸಾ-1 ರವರು ಪಾಟೀ ಸವಾಲಿನ ಸಂದರ್ಭದಲ್ಲಿ ನನ್ನ ಕತ್ತಿನಿಂದ ಚಿನ್ನದ ಸರವನ್ನು ಕಿತ್ತುಕೊಂಡು ಓಡಿ ಹೋದ ವ್ಯಕ್ತಿಯನ್ನು ಮುಖಾ ಮುಖಿ ಯಾಗಿ ಸ್ಪಷ್ಟವಾಗಿ ನೋಡಲಿಲ್ಲ, ಆದರೆ ಆತನ ದೇಹದಾಡ್ಯತೆ ನೋಡಿದೆ ಎಂಬುದಾಗಿ ನುಡಿದಿರುತ್ತಾರೆ. ಹಾಗೆಯೇ ಆತ ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದು ನೋಡಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಇಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಚಾಸಾ-1 ರವರು ಪಾಟೀ ಸವಾಲಿನಲ್ಲಿ ಪೊಲೀಸ್ ಠಾಣೆಯಲ್ಲಿ ಪೊಲೀಸರು ಫೋಟೋ ತೋರಿಸಿದರು, ಫೋಟೋದಲ್ಲಿ ಇದ್ದ ವ್ಯಕ್ತಿಯೇ ನನ್ನ ಚಿನ್ನದ ಸರವನ್ನು ಕಿತ್ತುಕೊಂಡು ಓಡಿ ಹೋದ ವ್ಯಕ್ತಿಯಾಗಿದ್ದರು ಎಂಬುದಾಗಿ ನುಡಿದಿರುತ್ತಾರೆ. ಆದರೆ, ವಿಸಿ ಮುಖಾಂತರ ಹಾಜರಾಗಿರುವ ಆರೋಪಿ ಠಾಣೆಯಲ್ಲಿ ಇರಲಿಲ್ಲ ಎಂಬುದಾಗಿ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ.

10. ಚಾಸಾ-2/ಪ್ರಾಸಾ-2 ರಂಗಸ್ವಾಮಿ, ಮಹಜರ್ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 30.05.2019ರಂದು ಪೊಲೀಸರು ನನ್ನನ್ನು ಚಿಕ್ಕಪೇಟೆಯಲ್ಲಿರುವ ಚಿನ್ನದ ಅಂಗಡಿಯ ಬಳಿ ಕರೆದುಕೊಂಡು ಹೋಗಿ ಚಿನ್ನದ ಅಂಗಡಿಗೆ ಹೋಗಿ ಅಲ್ಲಿ ಒಡವೆಗಳನ್ನು ಇಟ್ಟು ಫೋಟೋ ತೆಗೆದರು. ನಂತರ ಠಾಣೆಗೆ ವಾಪಸ್ ಕರೆದುಕೊಂಡು ಬಂದರು. ಅಂಗಡಿಯ ಬಳಿ ಪೊಲೀಸರು ಮಹಜರ್ ಮಾಡಿದರು. ನನ್ನ ಜೊತೆ ಸಿದ್ದಲಿಂಗಪ್ಪ ಎಂಬುವವರು ಮಹಜರ್ ಗೆ ಸಹಿ ಹಾಕಿದರು, ಆರೋಪಿಯನ್ನು ನಾನು ನೋಡಿಲ್ಲ ಎಂಬುದಾಗಿ ಅಭಿಯೋಜನೆ ಕೇಸಿಗೆ ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷ್ಯ ನುಡಿದಿರುತ್ತಾರೆ.

11. ಚಾಸಾ-3/ಪ್ರಾಸಾ-3 ಸಿದ್ದಲಿಂಗಪ್ಪ, ಅಮಾನತ್ತು ಪಂಚನಾಮೆ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ 30.05.2019ರಂದು ಪೊಲೀಸರು ನನ್ನನ್ನು ಹಾಗೂ ರಂಗಸ್ವಾಮಿಯನ್ನು ಅವರ ಜೀಪಿನಲ್ಲಿ ಬೆಂಗಳೂರಿನ ಸಿಟಿಯಲ್ಲಿರುವ ಒಂದು ಬಂಗಾರದ ಅಂಗಡಿಗೆ ಕರೆದುಕೊಂಡು ಹೋದರು. ಅಲ್ಲಿ ಚಿನ್ನದ ಅಂಗಡಿಯಲ್ಲಿ ವಿಚಾರ ಮಾಡಿ ವಾಪಸ್ ನಮ್ಮನ್ನು ಠಾಣೆಗೆ ಕರೆದುಕೊಂಡು ಬಂದು ಠಾಣೆಯಲ್ಲಿ ಸಹಿ ಹಾಕಿಸಿಕೊಂಡರು. ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ಆಭರಣವನ್ನು ಅಮಾನತು ಪಡಿಸಿಕೊಂಡಿಲ್ಲ ಹಾಗೂ ಆರೋಪಿಯನ್ನು ನಾನು ನೋಡಿಲ್ಲ ಎಂಬುದಾಗಿ ಅಭಿಯೋಜನೆ ಕೇಸಿಗೆ ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದ್ದರಿಂದ ಪ್ರಾಸಾ-2 ಮತ್ತು 3 ರವರ ಸಾಕ್ಷ್ಯವು ಅಭಿಯೋಜನೆಯ

ಕೇಸಿಗೆ ಯಾವುದೇ ರೀತಿ ಪ್ರಯೋಜನಕಾರಿಯಾಗಿರುವುದಿಲ್ಲ. ಆದ್ದರಿಂದ ಪ್ರಾಸಾ-2 ಮತ್ತು 3 ರವರ ಸಾಕ್ಷ್ಯವು ಸಹಾ ಸಂಪೂರ್ಣವಾಗಿ ಸೀಕರ್ಹವಾದ ಹಾಗೂ ಆರೋಪಿತನನ್ನು ಪ್ರಶ್ನಿತ ಕೃತ್ಯಕ್ಕೆ ಸಂಪರ್ಕಿಸುವ ಸುಸಂಬದ್ದ ಸಾಕ್ಷ್ಯ ಎಂದು ಹೇಳಲು ಬರುವುದಿಲ್ಲ ಎಂದು ಅಭಿಪ್ರಾಯಪಟ್ಟಿರುತ್ತೇನೆ.

12. ಚಾಸಾ-4/ಪ್ರಾಸಾ-4 ರಾಜಶೇಖರ್ ಪೊಲೀಸ್ ಉಪ ನಿರೀಕ್ಷಕರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 30.05.2019ರಂದು ನನಗೆ, ಚಾಸಾ-5, ಚಾಸಾ-7 ಮತ್ತು ಚಾಸಾ-8ರವರನ್ನು ಆರೋಪಿತರ ಪತ್ತೆಗಾಗಿ ನೇಮಕ ಮಾಡಿದ್ದು, ಅದರಂತೆ ನಾವು ಮಲ್ಲೇಶ್ವರಂ ಕಡೆಯಿಂದ ಓಕಳಿಪುರಂ ಬ್ರಿಡ್ಜ್ ಬಳಿ ಬೆಳಗ್ಗೆ 7.00 ಗಂಟೆ ಸಮಯದಲ್ಲಿ ಒಬ್ಬ ಆಸಾಮಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದರು, ಅಲ್ಲಿ ಚಾಸಾ-9 ರಿಂದ ಚಾಸಾ-12 ರವರು ಕೆಲಸ ನಿರ್ವಹಿಸುತ್ತಿದ್ದರು, ಆ ಆಸಾಮಿಯನ್ನು ಹಿಡಿದುಕೊಂಡು ವಿಚಾರಿಸಲಾಗಿ ಆತನ ಪ್ಯಾಂಟಿನ ಜೇಬಿನಲ್ಲಿ ಒಂದು ಚೈನು ಇತ್ತು, ಆತನ ಹೆಸರು ವಿಚಾರಿಸಲಾಗಿ ರವಿ @ ಮಾಡು, ತಮಿಳುನಾಡು ರಾಜ್ಯ ಎಂದು ತಿಳಿಸಿದನು, ಅವನು ಸರಿಯಾದ ಉತ್ತರ ನೀಡದ ಕಾರಣ ಆತನು ಕ್ಯತ್ಯದಲ್ಲಿ ಭಾಗಿಯಾಗಿರುವುದಾಗಿ ಅನುಮಾನ ಬಂದು ಆತನನ್ನು ಪಿ.ಎಸ್.ಐ.,ರವರ ಮುಂದೆ ತಂದು ಹಾಜರುಪಡಿಸಿರುತ್ತೇನೆ ಎಂಬುದಾಗಿ ಆರೋಪಿಯನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ.

13. ಚಾಸಾ-4/ಪ್ರಾಸಾ-5 ಚಂದ್ರಶೇಖರ್, ಇವರು ತಮ್ಮ ಸಾಕ್ಷ್ಯದಲ್ಲಿ ಸುಮಾರು 6-7 ವರ್ಷಗಳ ಹಿಂದೆ ಚಿನ್ನದ ಒಡವೆಗಳನ್ನು ಮಾರಾಟ ಮಾಡಲು ತಂದಿದ್ದರು,

ಮಾರಬೇಕೆಂದು ಹೇಳಿದರು, ಆ ಒಡವೆಗಳು ನನ್ನದೇ ಎಂದು ಹೇಳಿದರು, ನಾನು ಅವರಿಂದ ಒಡವೆಗಳನ್ನು ಖರೀದಿ ಮಾಡಲಿಲ್ಲ, ಆತನು ನೆಕ್ಲೇಸ್, ಬ್ರೇಸ್‌ಲೈಟ್, ಚೈನನ್ನು ತಂದಿದ್ದನು, ಏಳು ವರ್ಷಗಳ ಹಿಂದೆ ರೈಲ್ವೆ ಪೊಲೀಸರು ಅವರ ಸಿಬ್ಬಂದಿಯ ಜೊತೆ ಹಾಗೂ ಆರೋಪಿಯ ಜೊತೆ ನಮ್ಮ ಜುವೆಲ್ಲರಿ ಶಾಪ್‌ಗೆ ಬಂದು, ನಮ್ಮ ಅಂಗಡಿಯಲ್ಲಿದ್ದ ಒಡವೆಗಳ ಫೋಟೋಗಳನ್ನು ತೆಗೆದರು. ಪೊಲೀಸರಿಗೆ ನಾನು ಆರೋಪಿ ಒಡವೆಗಳನ್ನು ಮಾರಾಟ ಮಾಡಲು ಬಂದಿದ್ದರು ಎಂದು ತಿಳಿಸಿದೆ. ನಾನು ಪೊಲೀಸರಿಗೆ ಚಿನ್ನದ ಸರ, ಬ್ರೇಸ್‌ಲೈಟ್ ಹಾಜರುಪಡಿಸಿದೆ. ಅವುಗಳನ್ನು ಪೊಲೀಸರು ಜಪ್ತಿ ಮಾಡಿಕೊಂಡರು, ಪೊಲೀಸರು ಸ್ಥಳದಲ್ಲಿ ಯಾವುದೇ ಬರವಣಿಗೆ ಮಾಡಲಿಲ್ಲ ಎಂಬುದಾಗಿ ಅಮಾನತ್ತು ಪಂಚನಾಮೆಗೆ ತದ್ವಿರುದ್ಧವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷ್ಯವು ಪಾಟೀ ಸವಾಲಿನಲ್ಲಿ ಆರೋಪಿಯನ್ನು ಪೊಲೀಸರು ಆ ದಿನ ನಮ್ಮ ಅಂಗಡಿಗೆ ಕರೆದುಕೊಂಡು ಬಂದಾಗಲೇ ನಾನು ಆತನನ್ನು ನೋಡಿದ್ದು, ಪೊಲೀಸರು ಈತನೇ ಆರೋಪಿ ಎಂದು ಆರೋಪಿತನನ್ನು ತೋರಿಸಿದರು ಆಗ ನಾನು ಆರೋಪಿಯನ್ನು ನೋಡಿದೆ, ಅದಕ್ಕು ಮುಂಚೆ ನಾನು ಆರೋಪಿತನನ್ನು ನೋಡಿರಲಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಸದರಿ ಸಾಕ್ಷಿಯ ಈ ಸಾಕ್ಷ್ಯ ಹೇಳಿಕೆಯು ಅಭಿಯೋಜನೆ ಕೇಸಿಗೆ ವ್ಯತಿರಿಕ್ತವಾಗಿರುತ್ತದೆ. ಹಾಗೆಯೇ ಪ್ರಾಸಾ-5 ರವರು ಪೊಲೀಸರೇ ನೆಕ್ಲೇಸ್, ಬ್ರೇಸ್‌ಲೇಟ್, ಚೈನುಗಳನ್ನು ತಂದು ನನ್ನ ಅಂಗಡಿಯ ಮುಂದೆ ಇಟ್ಟು ಇದೇ ಒಡವೆಗಳನ್ನು ಆರೋಪಿ ಮಾರಾಟ ಮಾಡಿದ್ದು ಎಂದು ಹೇಳಿ ತೋರಿಸಿದರು ಎಂದರೆ ಸರಿ, ಹಾಗೂ ಆರೋಪಿ ಯಾವುದೇ ಒಡವೆಗಳನ್ನು ತಂದು ನನಗೆ ಮಾರಾಟ

ಮಾಡಿರಲಿಲ್ಲ ಎಂದರೆ ಸರಿ ಎಂಬುದಾಗಿ ಅಭಿಯೋಜನೆ ಕೇಸಿಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದ್ದರಿಂದ ಪ್ರಾಸಾ-5 ರವರ ಸಾಕ್ಷ್ಯವು ಆರೋಪಿತನ ವಿರುದ್ಧ ಅಭಿಯೋಜನೆಯವರು ಮಾಡಿರುವ ಆರೋಪವನ್ನು ರುಜುವಾತುಪಡಿಸಲು ಸಹಾಯಕಾರಿ ಆಗುವುದಿಲ್ಲ ಎಂದು ಅಭಿಪ್ರಾಯಪಡಲಾಗಿದೆ.

14. ಚಾಸಾ-14/ಪ್ರಾಸಾ-6 ನಾಗರಾಜು ಎಂ.ಎನ್. ವೃತ್ತ ನಿರೀಕ್ಷಕರು, ಎಸಿಬಿ ರೈಲ್ವೆ ವೃತ್ತ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 28.08.2020 ರಂದು ಈ ಪ್ರಕರಣದ ಕಡತವನ್ನು ಚಾಸಾ-13ರವರಿಂದ ಪಡೆದುಕೊಂಡು ಅಲ್ಲಿಯವರೆಗೆ ಆಗಿದ್ದ ತನಿಖೆಯನ್ನು ಪರಿಶೀಲಿಸಿ, 02.09.2019 ರಂದು ಪಿರ್ಯಾದಿದಾರರು ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿದ್ದ ಮಾಲನ್ನು ನ್ಯಾಯಾಲಯದ ಅದೇಶ ಪಡೆದು ಪಿರ್ಯಾದುದಾರರಿಗೆ ಬಿಡುಗಡೆ ಮಾಡಿರುತ್ತೇನೆ. ಆ ಕಾಲಕ್ಕೆ ಫೊಟೋ ತೆಗೆದಿರುತ್ತೇನೆ. ಸದರಿ ಫೊಟೋವನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ನಂತರ 21.09.2019 ರಂದು ಈ ಪ್ರಕರಣದಲ್ಲಿ ತನಿಖೆ ಪೂರ್ಣ ಗೊಂಡಿದ್ದು ಆರೋಪಿತ ವಿರುದ್ಧ ನ್ಯಾಯಾಲಯಕ್ಕೆ ದೋ.ರೋ ಪತ್ರ ಸಲ್ಲಿಸಿರುತ್ತೇನೆ ಎಂಬುದಾಗಿ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಸದರಿಯವರು ಎಲ್ಲಾ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ. ಪ್ರಾಸಾ-6 ರವರು ಮಾತ್ರ ಆರೋಪಿತರನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ-6 ರವರ ಸಾಕ್ಷ್ಯ ಒಂದನ್ನೇ

ಆಧಾರವಾಗಿಟ್ಟುಕೊಂಡು ಆರೋಪಿಯನ್ನು ಪ್ರಶ್ನಿತ ಕೃತ್ಯಕ್ಕೆ ಸಂಪರ್ಕಿಸಬಹುದೇ ಎಂಬುದನ್ನು ಪರಿಗಣಿಸಬೇಕಾಗುತ್ತದೆ.

15. ಚಾಸಾ-7/ಪ್ರಾಸಾ-13 ದಿಲೀಪ್ ಜಿ.ಆರ್., ಪೊಲೀಸ್ ಉಪ ನಿರೀಕ್ಷಕರು, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 27.02.2019ರಂದು ಬೆಳಗ್ಗೆ 10.30 ಗಂಟೆಗೆ ಪಿರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಪ್ರಕರಣ ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಧಿಕಾರಿಗಳಿಗೆ ನೀವೇದಿಸಿಕೊಂಡು ನಂತರ ದಿನಾಂಕ 30.05.2019ರಂದು ಅಪರಾಧ ಸಿಬ್ಬಂದಿಗಳನ್ನು ಸಿ.ಆರ್.87/2019 ಪ್ರಕರಣದಲ್ಲಿ ಆರೋಪಿ ಮತ್ತು ಮುದ್ದೆಮಾಲು ಪತ್ತೆಗಾಗಿ ಕರ್ತವ್ಯಕ್ಕೆ ನೇಮಿಸಿ ಕಳುಹಿಸಿಕೊಟ್ಟಿರುತ್ತೇನೆ. ನಂತರ ಅದೇ ದಿನ ಬೆಳಗ್ಗೆ 7.00 ಗಂಟೆಗೆ ಠಾಣಾ ಎ.ಎಸ್.ಐ., ಕಾಡಪ್ಪ ಮತ್ತು ಇತರೆ ಸಿಬ್ಬಂದಿಗಳು ಒಬ್ಬ ಆಸಾಮಿಯನ್ನು ಓಕಳಿಪುರಂ ರೈಲ್ವೆ ಸೇತುವೆ ಬಳಿ ಹಿಡಿದು ತಂದು ಹಾಜರುಪಡಿಸಿ, ವರದಿ ನೀಡಿರುತ್ತಾರೆ ಎಂಬುದಾಗಿ ನುಡಿದಿರುತ್ತಾರೆ. ಮುಂದುವರೆದು, ನಂತರ ಆರೋಪಿಯನ್ನು ವಿಚಾರಣೆಗೆ ಒಳಪಡಿಸಿ ವಿಚಾರಣೆ ಮಾಡಲಾಗಿ ಆತನು ಕೃತ್ಯದಲ್ಲಿ ಭಾಗಿಯಾಗಿರುವ ಬಗ್ಗೆ ತಪ್ಪೊಪ್ಪಿಗೆ ಮಾಡಿಕೊಂಡಿರುತ್ತಾರೆ. ನಂತರ ಸುಂಕದಕಟ್ಟೆ ಬಳಿ ಒಂದು ಜ್ಯುವೆಲ್ಲರಿ ಶಾಪ್ ಬಳಿ ಅಪರಾಧಿಕ ಕೃತದಲ್ಲಿ ಕಳ್ಳತನ ಮಾಡಿದ್ದ ಆಭರಣಗಳನ್ನು ಮಾರಾಟ ಮಾಡಿರುವುದಾಗಿ ಹಾಗೂ ಅದೇ ರೀತಿ ಬೆಂಗಳೂರಿನ ಅಕ್ಕಿಪೇಟೆಯ ರಜತಾದ್ರಿ ಜ್ಯುವೆಲ್ಲರಿಯಲ್ಲಿ ಮಾರಾಟ ಮಾಡಿರುವ ಬಗ್ಗೆ ತಪ್ಪೊಪ್ಪಿಗೆ ಮಾಡಿಕೊಂಡಿದ್ದು, ಆತನು

ನನ್ನನ್ನು, ಸಿಬ್ಬಂದಿಗಳಾದ ಕಾಡಯ್ಯ, ರಾಜಶೇಖರ್, ರಾಜಣ್ಣ, ನವೀನ್, ದೊಡ್ಡಯ್ಯ, ರವಿಕುಮಾರ್, ರಾಘವೇಂದ್ರರವರನ್ನು ಸುಂಕದಕಟ್ಟೆಯ ಮಹಾವೀರ್ ಚಂದ್ ಬ್ರೋಕರ್ ಶಾಪ್ ಬಳಿ ಕರೆದುಕೊಂಡು ಹೋಗಿದ್ದು ಅಲ್ಲಿ ಮಾಲೀಕರಾದ ಚೇತನ್ ರವರು ಆರೋಪಿಯನ್ನು ಗುರುತಿಸಿದರು. ಸದರಿ ಮಾಲೀಕರು ಆರೋಪಿ 20 ದಿನ ಅಥವಾ ಒಂದು ತಿಂಗಳ ಹಿಂದೆ ಆಭರಣಗಳನ್ನು ಮಾರಾಟ ಮಾಡಿರುವುದಾಗಿ ತಿಳಿಸಿದರು, ಸದರಿ ಆಭರಣಗಳನ್ನು ಹಾಜರುಪಡಿಸಿದರು. ಆರೋಪಿ ಸಹ ಸದರಿ ಚೇತನ್ ರವರನ್ನು ಗುರುತಿಸಿದರು. ನಂತರ ಚಿನ್ನದ ಒಡವೆಗಳನ್ನು ಪಂಚರ ಸಮಕ್ಷಮ 25 ಗ್ರಾಂ ತೂಕದ ಚಿನ್ನದ ಸರ, 20 ಗ್ರಾಂ ತೂಕದ ಚಿನ್ನದ ನೆಕ್ಲೇಸ್‌ಗಳನ್ನು ಜಪ್ತಿ ಮಾಡಿಕೊಂಡು, ಮಹಜರ್ ತಯಾರಿಸಿದೆ ಎಂಬುದಾಗಿ ನುಡಿಯುತ್ತಾರೆ.

16. ಪ್ರಾಸಾ-7 ರವರು ಮುಂದುವರೆದು, ನಂತರ ಅಲ್ಲಿಂದ ಅಕ್ಕಿಪೇಟೆಯ ರಜತಾದ್ರಿ ಜ್ಯುವೆಲ್ಲರ್ಸ್ ಬಳಿ ಆರೋಪಿ ನಮ್ಮನ್ನು ಹಾಗೂ ಸಿಬ್ಬಂದಿಗಳನ್ನು ಮತ್ತು ಪಂಚರನ್ನು ಕರೆದುಕೊಂಡು ಬಂದರು, ಅಲ್ಲಿ ಆರೋಪಿಯು ಜ್ಯುವೆಲ್ಲರಿ ಶಾಪ್‌ನ ಮಾಲೀಕರಾದ ಚಂದ್ರಶೇಖರ್ ರಾಜ್‌ರವರನ್ನು ತೋರಿಸಿ ಅವರ ಬಳಿ ತಾನು ಒಡವೆಗಳನ್ನು ಮಾರಾಟ ಮಾಡಿರುವುದಾಗಿ ತಿಳಿಸಿದರು, ನಂತರ ಮಾಲೀಕರನ್ನು ವಿಚಾರಿಸಿದ್ದು ಮಾಲೀಕರು ಒಪ್ಪಿಕೊಂಡು ಒಡವೆಗಳನ್ನು ಹಾಜರುಪಡಿಸಿರುತ್ತಾರೆ. ಅದು 28 ಗ್ರಾಂ ತೂಕದ ಚಿನ್ನದ ಸರವಾಗಿತ್ತು. ಅದನ್ನು ಜಪ್ತಿ ಮಾಡಿಕೊಂಡು ಸ್ಥಳದಲ್ಲಿ ಮಹಜರ್ ಮಾಡಿರುತ್ತೇನೆ ಎಂಬುದಾಗಿ ನುಡಿಯುತ್ತಾರೆ.  ಈಗಾಗಲೇ ಚರ್ಚಿಸಿದಂತೆ

ಪ್ರಾಸಾ-5 ಚಂದ್ರಶೇಖರ್ ರಾಜು ರವರು ತಮ್ಮ ಪಾಟೀ ಸವಾಲಿನಲ್ಲಿ ಪೊಲೀಸರೇ ನೆಕ್ಲೇಸ್, ಬ್ರೇಸ್‌ಲೇಟ್, ಚೈನುಗಳನ್ನು ತಂದು ನನ್ನ ಅಂಗಡಿಯ ಮುಂದೆ ಇಟ್ಟು ಇದೇ ಒಡವೆಗಳನ್ನು ಆರೋಪಿ ಮಾರಾಟ ಮಾಡಿದ್ದು ಎಂದು ಹೇಳಿ ತೋರಿಸಿದರು ಎಂದರೆ ಸರಿ, ಹಾಗೂ ಆರೋಪಿ ಯಾವುದೇ ಒಡವೆಗಳನ್ನು ತಂದು ನನಗೆ ಮಾರಾಟ ಮಾಡಿರಲಿಲ್ಲ ಎಂಬುದಾಗಿ ಸ್ಪಷ್ಟವಾಗಿ ನುಡಿದಿರುತ್ತಾರೆ. ಇವರ ಸಾಕ್ಷ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ತನಿಖಾಧಿಕಾರಿಗಳು ಆಪಾದಿತನು ನೀಡಿದ ಸ್ವಇಚ್ಛ್ವಾ ಹೇಳಿಕೆ ಆಧಾರದ ಮೇಲೆ ಪ್ರಾಸಾ-5 ರವರ ಜ್ಯುವೆಲರಿ ಅಂಗಡಿಯಿಂದ ಚಾಸಾ-1 ರವರಿಗೆ 28 ಗ್ರಾಂ ತೂಕದ ಬಂಗಾರದ ಚೈನನ್ನು ಜಪ್ತಿ ಮಾಡಿಕೊಂಡಿರುತ್ತಾರೆ ಎಂಬುದನ್ನು ನಂಬಲಾಗುವುದಿಲ್ಲ. ತನಿಖಾಧಿಕಾರಿಗಳು ಆರೋಪಿತನನ್ನು ಈ ಕೇಸಿಗೆ ಸಿಲುಕಿಸುವ ಸಲುವಾಗಿ ಆರೋಪಿತನ ಸ್ವಇಚ್ಛ ಹೇಳಿಕೆ ಆಧಾರದ ಮೇಲೆ ಪ್ರಾಸಾ-5 ರವರ ಜ್ಯುವೆಲ್ಲರಿ ಶಾಪ್ ನಿಂದ ಚಾಸಾ-1 ರವರ 28 ಗ್ರಾಂ ತೂಕದ ಬಂಗಾರದ ಚೈನನ್ನು ಜಪ್ತಿ ಮಾಡಿಕೊಂಡಿರುವುದಾಗಿ ಕಟ್ಟು ಕಥೆ ಆಧಾರದ ಮೇಲೆ ಆರೋಪಿತನ ವಿರುದ್ಧ ದೋಷರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ ಎಂಬುದಾಗಿ ಹೇಳಬಹುದಾಗಿರುತ್ತದೆ.

17. ಆರೋಪಿತನನ್ನು ತಪ್ಪಿತಸ್ಥರೆಂದು ನಿರ್ಣಯಸಲು ಭಾರತೀಯ ಸಾಕ್ಷ್ಯ ಅಧಿನಿಯಮ 27 ರಡಿ ಆರೋಪಿಯ ಸ್ವಇಚ್ಛ ಹೇಳಿಕೆಯ ಆಧಾರದ ಮೇಲೆ ಚಾಸಾ-1 ರವರಿಗೆ ಸೇರಿದ 28 ಗ್ರಾಂ ತೂಕದ ಚಿನ್ನದ ಸರವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂಬ ಸಂಗತಿಯನ್ನು ಸಾಬೀತುಪಡಿಸಬೇಕಾಗುತ್ತದೆ. ಆದರೆ ಈ

ಸಂಗತಿಯು ಅಭಿಯೋಜನಾ ಸಾಕ್ಷಿದಾರರ ಯಾವುದೇ ಸಾಕ್ಷಿದಾರರ ಸಾಕ್ಷ್ಯದಿಂದ ಸಾಬೀತಾಗಿರುವುದಿಲ್ಲ. ಬಹುಮುಖ್ಯವಾಗಿ ಅಭಿಯೋಜನಾ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ಆರೋಪಿತನನ್ನು ಗುರುತಿಸುವ ಬಗ್ಗೆ ಪೂರಕ ಸಾಕ್ಷ್ಯ ಲಭ್ಯವಿರುವುದಿಲ್ಲ. ಪ್ರಾಸಾ-1 ಮತ್ತು 6 ರವರ ಸಾಕ್ಷ್ಯವನ್ನು ಮಾತ್ರ ಪರಿಗಣನೆಗೆ ತಗೆದುಕೊಂಡು ಪ್ರಶ್ನಿತ ಕೃತ್ಯಕ್ಕೆ ಆರೋಪಿಯನ್ನು ತಪ್ಪಿತಸ್ಥರೆಂದು ಪರಿಗಣಿಸಲು ಬರುವುದಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಆರೋಪಿಯನ್ನು ಭಾರತೀಯ ದಂಡ ಸಂಹಿತೆ ಕಲಂ.392 ರ ಅಪರಾಧಕ್ಕಾಗಿ ತಪ್ಪಿತಸ್ಥರೆಂದು ಹೇಳಲು ಬರುವುದಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಅಭಿಯೋಜನೆಯವರು ಆರೋಪಿರವರ ವಿರುದ್ಧ ಹೊರಿಸಲಾದ ಆರೋಪವನ್ನು ನಿಸ್ಸಂದೇಹವಾಗಿ ರುಜುರವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ ಎಂದು ಹೇಳಬಹುದಾಗಿದೆ. ಆದ್ದರಿಂದ ಸಂಶಯದ ಲಾಭವನ್ನು ಆರೋಪಿರವರ ಪರವಾಗಿ ನೀಡಬೇಕಾಗುತ್ತದೆ. **ಈ ಎಲ್ಲಾ ಕಾರಣಗಳಿಂದಾಗಿ ನನ್ನ ನಿರ್ಣಯಕ್ಕೆ ಬಂದ ಅಂಶ 1ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.**

**18. ಅಂಶ 2ಃ-** ಅಂಶ 1ರಲ್ಲಿ ಚರ್ಚಿಸಿದ ಕಾರಣಗಳಿಗಾಗಿ ಆರೋಪಿಯನ್ನು ನಿರ್ದೋಷಿಯೆಂದು ತೀರ್ಮಾನಿಸಲಾಗಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿ ರವಿ ಅಲಿಯಾಸ್ ಮಧು ರವರನ್ನು ಭಾರತೀಯ ದಂಡ ಸಂಹಿತೆ ಕಲಂ 392 ಅಡಿಯಲ್ಲಿನ ಅಪರಾಧಕ್ಕಾಗಿ ನಿರ್ದೋಷಿಯೆಂದು ತೀರ್ಮಾನಿಸಲಾಗಿದೆ.

ಆರೋಪಿ ಮತ್ತು ಅವರ ಜಾಮೀನುದಾರರು ಬರೆದು ಕೊಟ್ಟಿರುವ ಮುಚ್ಚಳಿಕೆಯನ್ನು ರದ್ದುಪಡಿಸುವಂತೆ ಆದೇಶಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿದ ನಂತರ ತಿದ್ದುಪಡಿ ಮಾಡಿ ದಿನಾಂಕ 24.07.2026 ರಂದು ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ಉಚ್ಚರಿಸಲಾಯಿತು).

(ಲೋಕೇಶ),
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ., ರಾಮನಗರ.

## ಅನುಬಂದಃ

## ಅಭಿಯೋಜಕರ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಪಟ್ಟಿಃ

| | | |
|---|---|---|
| ಪಿ.ಡಬ್ಲ್ಯೂ-1 | ಃ | ಶ್ರೀಮತಿ ಸುಶ್ಮಿತ |
| ಪಿ.ಡಬ್ಲ್ಯೂ-2 | ಃ | ಶ್ರೀ ರಂಗಸ್ವಾಮಿ |
| ಪಿ.ಡಬ್ಲ್ಯೂ-3 | ಃ | ಶ್ರೀ ಸಿದ್ದಲಿಂಗಪ್ಪ |
| ಪಿ.ಡಬ್ಲ್ಯೂ-4 | ಃ | ಶ್ರಿ ರಾಜಶೇಖರ್ |
| ಪಿ.ಡಬ್ಲ್ಯೂ-5 | ಃ | ಶ್ರೀ ಚಂದ್ರಶೇಖರ್ |
| ಪಿ.ಡಬ್ಲ್ಯೂ-6 | ಃ | ಶ್ರೀ ನಾಗರಾಜು |
| ಪಿ.ಡಬ್ಲ್ಯೂ-7 | ಃ | ಶ್ರೀ ದಿಲೀಪ್ ಕುಮಾರ್. |

## ಅಭಿಯೋಜಕರ ಪರ ಹಾಜರುಪಡಿಸಿದ ದಾಖಲೆಗಳ ಪಟ್ಟಿಃ

| | | |
|---|---|---|
| ನಿಪಿ-1 | ಃ | ದೂರು |
| ನಿಪಿ-2 | ಃ | ಭಾವಚಿತ್ರ |
| ನಿಪಿ-3 ಮತ್ತು 4 | ಃ | ಆರೋಪಿ ಭಾವಚಿತ್ರಗಳು |
| ನಿಪಿ-5 | ಃ | ಚಿನ್ನದ ಸರ ಬಿಡಿಸಿಕೊಂಡ ಭಾವಚಿತ್ರ |
| ನಿಪಿ-6 | ಃ | ಪಂಚನಾಮೆ |
| ನಿಪಿ-7 | ಃ | ಮಹಜರ್ ಭಾವಚಿತ್ರ |
| ನಿಪಿ-8 | ಃ | ಚಾಸಾ-2 ರವರ ಹೇಳಿಕೆ ಭಾಗ |
| ನಿಪಿ-9 | ಃ | ಚಾಸಾ-3 ರವರ ಹೇಳಿಕೆ ಭಾಗ |

KARN020000622020



ಸಿ.ಸಿ. ನಂ.4/2020

ನಿಪಿ-10 ಃ ಪ್ರಥಮ ವರ್ತಮಾನ ವರದಿ
ನಿಪಿ-11 ಃ ಸಿಬ್ಬಂದಿಗಳು ನೀಡಿದ ನಿವೇದನೆ.

**ಆರೋಪಿತನ ಪರ ಮಾಡಿದ ಸಾಕ್ಷಿದಾರರ ಪಟ್ಟಿಃ**

-ಇಲ್ಲ-

**ಆರೋಪಿತನ ಪರ ಹಾಜರುಪಡಿಸಿದ ದಾಖಲೆಗಳ ಪಟ್ಟಿಃ**

-ಇಲ್ಲ-

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ., ರಾಮನಗರ.